

# ಶ್ರೀರಾಮಕೃಷ್ಣರ ದೃಷ್ಟಾಂತ ಚಿತ್ರ

ಒಬ್ಬ ವ್ಯಕ್ತಿಯು ಯಾವಾಗಲೂ ಒಂದು ನಾಯಿಯನ್ನು ತೊಡೆಯ ಮೇಲೆ ಕೂರಿಸಿಕೊಂಡು ಮುದ್ದಿಸುತ್ತಿದ್ದ.



ಯಾರೊ ಅವನಿಗೆ ಹೇಳಿದರು ನಾಯಿಯನ್ನು ಆ ರೀತಿ ಮುದ್ದಿಸುವುದು ಒಳ್ಳೆಯದಲ್ಲ ಎಂದು.



ಆ ವ್ಯಕ್ತಿ ನಾಯಿಯನ್ನು ತನ್ನ ತೊಡೆಯ ಮೇಲಿಂದ ಓಡಿಸಿದ.



ಕಲೆ : ಸೋಮಶೇಖರ

ಆದರೆ ಹಿಂದಿನ ಅಭ್ಯಾಸಬಲದಿಂದ ಅದು ಮತ್ತೆ ಮತ್ತೆ ಆತನ ತೊಡೆಯಮೇಲೆ ಬಂದು ಕೂರುತ್ತಿತ್ತು.



ಹಾಗೆಯೇ ಮನಸ್ಸಿನಲ್ಲಿ ಭಾವಿಸಲ್ಪಟ್ಟ ಪ್ರಾಪಂಚಿಕ ಚಿಂತನೆಗಳು ಅಷ್ಟು ಸುಲಭವಾಗಿ ಅದನ್ನು ಬಿಟ್ಟು ಹೋಗುವುದಿಲ್ಲ. ಆಗಾಗ ಅವನ್ನು ಹೊಡೆದು ಓಡಿಸುತ್ತಿರಬೇಕು.